**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**EP 228-23** **ಸಿಡಬ್ಲ್ಯೂ ಃ** **1**

ಸಾಕ್ಷಿದಾರರ ಹೆಸರು ಃ ಸುಧಾಕರ ಕಟ್ಟಿಮನಿ

ತಂದೆ ಹೆಸರು ಃ ಪಾಂಡುರಂಗ

ವಯಸ್ಸು ಃ 59 ವರ್ಷ

ಉದ್ಯೋಗ ಃ ಕಾರ್ಯನಿರ್ವಾಹಕ ಅಭಿಯಂತರರು

ವಾಸಸ್ಥಳ ಃ ಯೋಜನಾ ವಿಭಾಗ, ಗದಗ.

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 24.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

ಈ ಪ್ರಕರಣದಲ್ಲಿ ನ್ಯಾಯಾಲಯವು ದಿಃ 9.2.2026 ರಂದು ಈ ನ್ಯಾಯಾಲಯವು ನಮಗೆ ಸಮನ್ಸ ಹೊರಡಿಸಿತ್ತು. ಆ ಪ್ರಕಾರ ದಿಃ 10.2.2026 ರಂದು ಶ್ರೀಮತಿ ಲಲಿತಾ ಗೌಡರ, ಸಹಾಯಕ ಇಂಜಿನಿಯರ ರವರು ನ್ಯಾಯಾಲಯದಲ್ಲಿ ಹಾಜರಾಗಿದ್ದರು. ಆ ಕಾಲಕ್ಕೆ ನಾನು ಹುಬ್ಬಳ್ಳಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಉಪ-ವಿಭಾಗ, ಹುಬ್ಬಳ್ಳಿಯ ಲ್ಲಿ ಕೆಲಸ ಮಾಡುತ್ತಿದ್ದೆನು. ನ್ಯಾಯಾಲಯವು ನನ್ನನ್ನು ಕೋರ್ಟ ಕಮೀಶನರ ಅಂತಾ ನೇಮಕ ಮಾಡಿ ದಿಃ 13.2.2026 ರಂದು ಕೋರ್ಟ ಕಮೀಶನರ ಅಂತಾ ನೇಮಕ ಮಾಡಿ ವರದಿ ನೀಡಲು ಆದೇಶ ಮಾಡಿತ್ತು. ದಿಃ 16.2.2026 ರಂದು ನಮ್ಮ ಕಚೇರಿಯಿಂದ ಈ ಕೇಸಿನ ಎಲ್ಲಾ ಪಕ್ಷಗಾರರಿಗೆ ಹಾಗೂ ವಕೀಲರಿಗೂ ನೋಟಿಸ ನೀಡಿ ದಿಃ 23.2.2026 ರಂದು ಮಃ 3.30 ಗಂಟೆಗೆ ಹಾಜರಿರಲು ನೋಟಿಸು ನೀಡಲಾಗಿತ್ತು. ದಿಃ 23.2.2026 ರಂದು ಸಮಯ 3.30 ಗಂಟೆಯಿಂದ ಸಂಜೆಃ 6 ಗಂಟೆವರೆಗೆ ಕಮೀಶನರ ಕೆಲಸವನ್ನು ಮಾಡಿರುತ್ತೇನೆ. ಆ ಕಾಲಕ್ಕೆ ಡಿಕ್ರಿ ಹೋಲ್ಡರ ಪರವಾಗಿ ಅವರ ಮಗಳು ಬೇಬಿ ಕಂಪ್ಲಿ ಎಂಬುವವರು ಹಾಜರಾಗಿದ್ದರು. ಸಾವಕ್ಕ ಸುಳ್ಳದ ರವರು ಹಾಜರಾಗಿದ್ದರು. ಶ್ರೀ ಎ ಎಲ್ ನಿಲೋಪಂತ್, ವಕೀಲರು ಹಾಜರಿದ್ದರು. ಜೆ ಡಿ ಆರ್ ರವರ ಪರವಾಗಿ ಶ್ರೀ ಆರ್ ಬಿ ಹೆಬ್ಬಾಳ, ವಕೀಲರು, ಹಾಗೂ ಶ್ರೀ ಪ್ರಲ್ಹಾದಗೌಡ ಕೃಷ್ಣೇಗೌಡ ಪಾಟೀಲ ರವರು ಹಾಜರಿದ್ದರು. ಇವರೆಲ್ಲರ ಸಹಿ ತೆಗೆದುಕೊಂಡು ಅನೆಕ್ಸರ – 2 ರಲ್ಲಿ ಲಗತ್ತಿಲಸಾಗಿದೆ.

**EP** **228-23** **ಸಿಡಬ್ಲ್ಯೂಃ** **1**

ದಿಃ 23.02.2026 ರಂದು ನಾವು ನ್ಯಾಯಾಲಯಕ್ಕೆ ಕೋರ್ಟ ಕಮೀಶನರ ವರದಿ ಸಲ್ಲಿಸಲು ಸಮಯ ಕೋರಿರುತ್ತೇವೆ. ದಿಃ 27.2.2026 ರಂದು ಉಭಯ ಪಕ್ಷಗಾರರಿಗೆ ನೋಟಿಸ ನೀಡಿ ಕಟ್ಟಡದ ಜೀವಿತಾವಧಿ ನಿರ್ಧಾರ ಮಾಡಲು ಕಟ್ಟಡದ ಪರವಾನಿಗೆ ಕಟ್ಟಡದ ಮುಕ್ತಾಯ ಪ್ರಮಾಣ ಪತ್ರ ಹಾೂ ಇತ್ತಿಚಿನ ತೆರಿಗೆ ಪಾವತಿಸಿದ ರಶೀದಿಗಳು ಇತ್ಯಾದಿಗಳನ್ನು ತರಲು ತಿಳಿಸಿದ್ದೆವು. ಆದರೆ ಸದರಿಯವರು ನಿಗದಿತ ಅವಧಿ ಯಲ್ಲಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಇದರಿಂದ ಕೋರ್ಟ ಕಮೀಶನರ ರಾದ ನಾನು ಕಟ್ಟಡದ ಜೀವಿತ ಅವಧಿಯನ್ನು ಕಟ್ಟಡವನ್ನು ಬಾಹ್ಯವಾಗಿ ನೋಡಿ ಹಾಗೂ ಕೆಲವೊಂದು ತಾಂತ್ರಿಕಗಳಿಂದ ನಾನು ಕಟ್ಟಡದ ಜೀವಿತಾವಧಿಯನ್ನು 60 ವರ್ಷಗಳು ಇರುತ್ತದೆ ಎಂದು ನಿರ್ಧಾರ ಮಾಡಿರುತ್ತೇನೆ. ಅಲ್ಲದೇ ಪಕ್ಷಗಾರರ ಮೌಖಿಕ ಅಭಿಪ್ರಾಯವನ್ನು ಸಹ ಆ ಕಾಲಕ್ಕೆ ಪಡೆದಿದ್ದೇನೆ. ಇದಾದ ನಂತರ ದಿಃ 6.3.2026 ರಂದು ಕಮೀಶನರ ವರದಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ. ಸದರಿ ಕಮೀಶನರ ಕೆಲಸ ಮಾಡುವ ಕಾಲಕ್ಕೆ ಪೊಟೋಗಳನ್ನು ಉಭಯ ಪಕ್ಷಗಾರರ ಸಮಕ್ಷಮ ತೆಗೆಸಿದ್ದೇನೆ. ಈಗ ಸಾಕ್ಷಿಯೂ ಸದರಿ ಕಮೀಶನರ ವರದಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿ ಅನೆಕ್ಸರ -1 ರಿಂದ 4 ನೇದ್ದವುಗಳ ಸಮೇತ ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಬರೆದ ಪತ್ರವನ್ನು ನಿಪಿ.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಬಿ ಹೆಚ್, ವಕೀಲರು ಮೂರನೇ ಪಕ್ಷಗಾರರ ಪರವಾಗಿ ಪಾಟಿ ಸವಾಲು ಇಲ್ಲವೆಂದು ಹೇಳಿದ್ದಾರೆ.**

**ಪಾಟಿ ಸವಾಲುಃ ಶ್ರೀ ಎ ಎಲ್ ಎನ್ ವಕೀಲರಿಂದಃ**

ನಾನು ಬಿ ಇ ಸಿವಿಲ್ ಪದವೀಧರವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು 2003 ರಲ್ಲಿ ಪಿಡಬ್ಲ್ಯೂ ಡಿ ಇಲಾಖೆಗೆ ಸಹಾಯಕ ಇಂಜಿನಿಯರನಾಗಿ ನೇಮಕಗೊಂಡಿದ್ದೇನೆ. ಯಾವ ಉದ್ದೇಶಕ್ಕೆ ಕಟ್ಟಡದ ಮೌಲ್ಯ ವರದಿಯನ್ನು ಹಾಜರಪಡಿಸಲು ನ್ಯಾಯಾಲಯವು ಆದೇಶ ಮಾಡಿತ್ತು ಅಂದರೆ, ನ್ಯಾಯಾಲಯದ ಆದೇಶದ ಪ್ರಕಾರ ನಾನು ಕಮೀಶನರ ವರದಿಯನ್ನು ಹಾಜರಪಡಿಸಿದ್ದೇನೆಂದು ಹೇಳುತ್ತಾರೆ.

**EP 228-23** **ಸಿಡಬ್ಲ್ಯೂ:** **1**

ಕಟ್ಟಡದ ಜೀವಿತಾವಧಿಯನ್ನು ನಿರ್ಧಾರ ಮಾಡಲು ಯಾವ ವರ್ಷದಲ್ಲಿ ಕಟ್ಟಡ ಕಟ್ಟಲಾಗಿದೆ ಎಂದು ದಾಖಲೆಗಳು ಅವಶ್ಯ ಅಂದರೆ ಸರಿ. ಪ್ರಲ್ಲಾದಗೌಡ ಪಾಟೀಲರಿಗೆ ನಾವು ದಾಖಲೆಗಳನ್ನು ಹಾಜರಪಡಿಸುವಂತೆ ಕೇಳಿದ್ದೇವೆ. ಆದರೆ ಅವರು ಅವುಗಳನ್ನು ಹಾಜರಪಡಿಸಿಲ್ಲ. ನಾನು ಕಮೀಶನರ ಕೆಲಸ ಮಾಡಿದ ನಂತರ ದಾಖ್ಲೆಗ್ಳನ್ನು ಹಾಜರಪಡಿಸಲು ನೋಟಿಸ ನೀಡಿದ್ದೇನೆ. ಕಮೀಶನರ ಕೆಲಸ ಮಾಡುವ ಕಾಲಕ್ಕೆ ನಾನು ದಾಖಲೆಗಳನ್ನು ಕೇಳಿಲ್ಲ. ಕಮೀಶನರ ಕೆಲಸ ಮಾಡಿದ ನಂತರ ಕಟ್ಟಡದ ಜೀವಿತಾ ಅವಧಿಯನ್ನು ನಿರ್ಧಾರ ಮಾಡಲು ದಾಖಲೆಗಳು ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟು ನಾನು ನೋಟಿಸು ನೀಡಿದ್ದೇನೆ. ದಾಖಲೆಗಳನ್ನು ಕೇಳಿದಾಗ ಪ್ರಲ್ಲಾದಗೌಡ ರವರು ದಾಖಲೆಗಳನ್ನು ಕೊಡದೆ ಸಹಕಾರ ಮಾಡದ ಕಾರಣ ಕಟ್ಟಡದ ಜೀವಿತಾವಧಿಯನ್ನು ನಿಖರವಾಗಿ ಹೇಳಲು ಬರುವುದಿಲ್ಲ ಅಂದರೆ ಸರಿ. ಈ ರೀತಿ ಸಂದರ್ಭ ಇರುವುದರಿಂದ ಕಟ್ಟಡದ ಜೀವಿತ ಅವಧಿಯನ್ನು ಅಂದಾಜಿನ ಮೇಲೆ ಹೇಳಿದ್ದೇನೆ ಅಂದರಿ ಸರಿ. ಕಮೀಶನರ ರ ಕೆಲಸದ ಸಮಯದಲ್ಲಿ ಪಕ್ಷಗಾರರ ಸಮಕ್ಷಮ ಕಟ್ಟಡದಲ್ಲಿರುವ ಸ್ಟೀಂತನ್ನು ಪರೀಕ್ಷೆ ಮಾಡಿಲ್ಲ. ಬಾಹ್ಯವಾಗಿ ಕಟ್ಟಡವನ್ನು ನೋಡಿ ಅಂದಾಜು ಜೀವಿತಾವಧಿ ಹೇಳಬಹುದು. ನ್ಯಾಯಾಲಯವು ತಾಂತ್ರಿಕ ಸಲಕರಣೆ ಮೂಲಕ ಜೀವಿತಾವಧಿಯನ್ನು ಕಂಡುಹಿಡಿಯಲು ಹೇಳಿರುವುದಿಲ್ಲ. ಮೌಲ್ಯ ನಿರ್ಧರಿಸಲು ಹೇಳಿದ್ದಕ್ಕೆ ನಾನು ಮೌಲ್ಯ ನಿರ್ಧರಿಸಿದ್ದೇನೆ. ನನ್ನ ಕಮೀಶನರ ವರದಿಯಲ್ಲಿ ಕಟ್ಟಡ ನವೀಕರಣ ಗೊಂಡಿದೆ ಹಾಗೂ ಪ್ಲಾಸ್ಟರ ಮಾಡಲಾಗಿದೆ ಎಂದು ಹೇಳಿದ್ದೇನೆ. ಹಾಗೂ ಪೇಂಟ ಮಾಡಲಾಗಿದೆ ಎಂದು ಹೇಳಿದ್ದೇನೆ ಅಂದರೆ ಸರಿ. ಯಾವುದೇ ಹಳೆ ಕಟ್ಟಡಕ್ಕೆ ಬಣ್ಣ ಹಚ್ಚು ವ ಕಾಲಕ್ಕೆ ಗೋಡೆಗಳಲ್ಲಿರುವ ಬಿರುಕುಗಳನ್ನು ಸರಿಪಡಿಸಿ ಬಣ್ಣ ಹಚ್ಚುತ್ತಾರೆ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ. ನಾನು ಹೊಸದಾಗಿ ಪೇಂಟಿಂಗ ಮಾಡಿದ್ದಾರೆ. ಪ್ಲಾಸ್ಟರ ಮಾಡಿದ್ದಾರೆಂದು ವರದಿಯಲ್ಲಿ ಹೇಳಿಲ್ಲ. ಇದ್ದ ಸ್ಥಿತಿಯಲ್ಲಿರುವುದನ್ನು ಹೇಳಿದ್ದೇನೆ. ಈಗ ಸಾಕ್ಷಿಗೆ 8 ಪೊಟೋಗಳನ್ನು ತೋರಿಸಲಾಗಿ ಸದರಿ ಪೊಟೋಗಳನ್ನು ಕಮೀಶನರ ಕೆಲಸ ಮಾಡುವ ದಿನದಂದು ತೆಗೆದ ಕಟ್ಟಡದ ಪೊಟೋಗಳು ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯೂ ಅದರಲ್ಲಿ ಜಿ ಪಿ ಎಸ್ ಆಧಾರದ ಮೇಲೆ ಸಮಯ, ದಿನಾಂಕ ಇರುವುದಿಲ್ಲ ಎಂದು ಹೇಳಿರುತ್ತಾರೆ. ಕಮೀಶನರ ಕೆಲಸ ಮಾಡಿದ ಕಟ್ಟಡದ ಪೊಟೋಗಳು ಇರಬಹುದು. ಸದರಿ 8 ಪೊಟೋಗಳನ್ನು ನಿಆರ್ - 1 ರಿಂದ 8 ಎಂದು ಗುರುತಿಸಲಾಯಿತು. ಕಟ್ಟಡದ ಉದ್ದ ಹಾಗೂ ಅಗಲ ವರದಿಯಲ್ಲಿ ಹೇಳಿಲ್ಲ ಅಂದರೆ ಸರಿಯಲ್ಲ.

ನಮ್ಮ ಇಲಾಖೆಯ ತಾಂತ್ರಿಕ ಇಲಾಖೆ ಏಕ ರೂಪದ ದರ ಪಟ್ಟಿ ಸಂಪೂಟ -1 ಹಾಗೂ ಸಂಪೂಟ-2, ಲೋಕೋಪಯೋಗಿ ಇಲಾಖೆಯ ದರಗಳಂತೆ ಸದರಿ ಕಟ್ಟಡದ ಮೌಲ್ಯವನ್ನು ನಿರ್ಧರಿಸಲಾಗಿದೆ. 2023-24 ರ ಮುಂದುವರೆದ ತಾಂತ್ರಿಕ ಇಲಾಖೆ ಏಕರೂಪ ದರ ಪಟ್ಟಿ ಪ್ರಕಾರ ಸದರಿ ಅಂದಾಜನ್ನು ನಿರ್ದರಿಸಲಾಗಿದೆ. ನಾವು ನಮ್ಮ ಲೋಕೋಪಯೋಗಿ ಇಲಾಖೆಯ ಕಟ್ಟಡವನ್ನು ಕಟ್ಟಬೇಕಾದರೆ ಉಪಯೋಗಿಸಬೇಕಾದ ಸಾಮಗ್ರಿಗಳು ಎಷ್ಟು ಇರಬಹುದೆಂದು ಅಂದಾಜು ಮಾಡುತ್ತೇವೆಯೋ ಅದೇ ರೀತಿ ಈ ಕಟ್ಟಡಕ್ಕೂ ಕೂಡಾ ಅದೇ ಪ್ರಮಾಣದ ಸಾಮಗ್ರಿಗಳನ್ನು ಉಪಯೋಗಿಸಿರಬಹುದೆಂದು ಅಂದಾಜು ಮಾಡಿರುತ್ತೀರಿ ಅಂದರೆ ಸರಿ. ನಾನು ಕಮೀಶನರ ಕೆಲಸ ಮಾಡಿದ ಕಟ್ಟಡ ಖಾಸಗಿ ವ್ಯಕ್ತಿಗಳು ಕಟ್ಟಿದ್ದ ಕಟ್ಟಡ ಅಂದರೆ ಸರಿ. ಖಾಸಗಿ ವ್ಯಕ್ತಿಗಳು ನಮ್ಮ ಇಲಾಖೆಯ ನಿಯಮದಂತೆ ಕಟ್ಟಡ ಕಟ್ಟುವುದಿಲ್ಲ ಅಂದರೆ ಸರಿಯಲ್ಲ. ನಿಜ ಸಂಗತಿ ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರೋಲಿಂಗ ಶಟರ್ಸ ನಕಾಶೆಯಲ್ಲಿ ತೋರಿಸಿಲ್ಲ. ರೋಲಿಂಗ ಶಟರ್ಸ ನಾವು ಅಳತೆ ಮಾಡಿಲ್ಲ ಅಂದಾಜು ನಮ್ಮ ಇಲಾಖೆಯ ನಿಯಮದಂತೆ ತೋರಿಸಿದ್ದೇವೆ ಅಂದರೆ ಸರಿಯಲ್ಲ.

ಶೇಕಡಾ 27 ರಷ್ಟು ನವೀಕರಣ ಅಂತಾ ತೋರಿಸಿದ್ದು ರೋಲಿಂಗ ಶಟರ್ಸ, ಪೇಂಟಿಂಗ, ಇಲೆಕ್ಟ್ರಿಕಲ್ ಸರ್ವಿಸೆಸ್, ರೂಫ ರಿಪೇರಿ ಆಧಾರದ ಮೇಲೆ ತೋರಿಸಿದ್ದೇನೆ. ನವೀಕರಣವನ್ನು ಸಕರಾರದ ನಿಯಮದಂತೆ ಅಂದಾಜು ಮಾಡಿ ತೋರಿಸಿದ್ದೇವೆ. ರೋಲಿಂಗ ಶಟರ್ಸ ನವೀಕರಣ ಏನು ಆಗಿದೆ ಅದರ ಆಧಾರದ ಮೇಲೆ ಶೇಕಡಾ 15 ರಷ್ಟು ನವೀಕರಣ ತೋರಿಸಿದ್ದೇವೆ. ಹೊಸ ಪೇಂಟಿಂಗ ಆಗಿದ್ದರಿಂದ ಶೇಕಡಾ 2 ಎಂದು ಹೇಳಿದ್ದೇವೆ. ಪ್ರಲ್ಲಾದಗೌಡ ರವರ ಕಡೆಯಿಂದ ದಾಖಲೆ ಪಡೆಯದೆ ಶೇಕಡಾ 27 ರಷ್ಟು ನವೀಕರಣವೆಂದು ಅಂದಾಜಿನ ಮೇಲೆ ತೋರಿಸಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಯಾವುದೇ ದಾಖಲೆ ಪಡೆದಿಲ್ಲವೆಂದು. ನಾನು ನಮ್ಮ ಲೋಕೋಪಯೋಗಿಯ ಇಲಾಖೆಯ ಡಿಕೋಡ ಪ್ರಕಾರ ನವೀಕರಣಕ್ಕಾಗಿ ತಗಲುವ ಶೇಕಡಾವಾರನ್ನು ನಮೂದಿಸಿದ್ದೇನೆ. ನವೀಕರಣ ಮಾಡಿದರೆ ಮಾತ್ರ ಆ ಶೇಕಡಾವಾರು ಬರುತ್ತದೆ ಅಂದರೆ ಸರಿ. ನವೀಕರಣ ಮಾಡಿ ಎಷ್ಟು ವರ್ಷಗಳಾಗಿದೆ ಎಂದು ಹೇಳಲು ಸಾಧ್ಯವಿದಿಯಾ? ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯೂ ಅದನ್ನು ಬಾಹ್ಯವಾಗಿ ನೋಡಿ ಹೇಳುತ್ತೇವೆಂದು ಹೇಳುತ್ತಾರೆ.

**EP** **228-23** **ಸಿಡಬ್ಲ್ಯೂ಼ಃ** **1**

ದಾಖಲೆಗಳು ಲಭ್ಯವಾಗದ ಕಾರಣ ಬಾಹ್ಯವಾಗಿ ನೋಡಿ ಹೇಳುತ್ತಿದ್ದೇನೆ ಅಂದರೆ ಸರಿ. 1 ನೇ ಬಿಲ್ಡಿಂಗ ರಾಘವರೆಡ್ಡಿ ಕಟ್ಟಡ ನವೀಕರಣಗೊಂಡು 3 ವರ್ಷಗಳಾಗಿದೆ. ಆದರ್ಶ ಪ್ಲಾಸ್ಟಿಕ್ಸ ಕಟ್ಟಡ ನವೀಕರಣ ಮಾಡಿ ಸುಮಾರು 10 ವರ್ಷಗಳಾಗಿದೆ. ಆದರೆ ವರದಿಯಲ್ಲಿ ನವೀಕರಣಗೊಂಡು 10 ವರ್ಷ ಎಂದು ಹೇಳಿಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.